ಓ.ಎಸ್. ನಂ. 126/2014

ಡಿ.ಡಬ್ಲ್ಯು: 02 (ಚನ್ನಬಸಪ್ಪ)

ದಿನಾಂಕ: 30.08.2025 ರಂದು ಮುಖ್ಯ ವಿಚಾರಣೆಗೆ ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರ ಶ್ರೀ ಹೆಚ್ ಎಂ ಎಸ್ ವಕೀಲರಿಂದ:

ಸಾಕ್ಷ್ಯ ರೂಪದಲ್ಲಿ ಹಾಜರು ಪಡಿಸಿರುವ ನನ್ನ ಪ್ರಮಾಣ ಪತ್ರದಲ್ಲಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತವೆ ಮತ್ತು ಅದನ್ನು ತಿಳಿದುಕೊಂಡು ನಾನು ನನ್ನ ಸಹಿ ಮಾಡಿದ್ದೇನೆ.

ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸಿದ ದಾಖಲೆಗಳ ವಿವರ ಈ ಕೆಳಗಿನಂತಿವೆ:

ದಿ: 10.09.1981 ರ ಮರಣ ಶಾಸನವನ್ನು ಹಾಜರುಪಡಿಸಿದ್ದು ಅದನ್ನು ನಿಡಿ 29 ಎಂದು ಗುರುತಿಸಲಾಯಿತು. ಅದನ್ನು ನಾನೇ ಬರೆದಿದ್ದು, ಅದರಲ್ಲಿ ನನ್ನ ಸಹಿ ಇದ್ದು, ಅದನ್ನು ನಿಪಿ 29 ಎ ಎಂದು ಗುರುತಿಸಲಾಯಿತು. ಅದರಲ್ಲಿ ಗಂಗಮ್ಮ ಅವರ ಹೆಬ್ಬೆಟ್ಟು ಗುರುತು ಇದ್ದು, ಅದನ್ನು ನನ್ನ ಸಮಕ್ಷಮ ಮಾಡಿರುತ್ತಾರೆ. ಸದರಿ ಹೆಬ್ಬೆಟ್ಟು ಗುರುತನ್ನು ನಿಡಿ 29 ಬಿ ಎಂದು ಗುರುತಿಸಲಾಯಿತು. ಅದರಲ್ಲಿ ನೀಲಕಂಠಯ್ಯ ಮತ್ತು ನಿಂಗಪ್ಪ ಎಂಬ ಇಬ್ಬರು ಸಾಕ್ಷಿದಾರರು ಸಹಿ ಮಾಡಿರುತ್ತಾರೆ. ಸದರಿ ಸಾಕ್ಷಿದಾರರ ಸಹಿಗಳನ್ನು ನಿಡಿ 29 ಸಿ ಮತ್ತು ಡಿ ಎಂದು ಗುರುತಿಸಲಾಯಿತು.

ಮುಖ್ಯ ವಿಚಾರಣೆ: ಮುಕ್ತಾಯ.

ವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲಿಗೆ ಸಮಯಾವಕಾಶ ನೀಡಲಾಯಿತು.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,

ಕೂಡ್ಲಿಗಿ.